<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

**ಸಿ.ಸಿ ನಂಬ್ರ: 543/2017**

**ಚಾಸಾ-6 ಫ್ರಾಸಾ-6**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ. ಕಾರ್ತಿಕ್ |
| ತಂದೆಯ ಹೆಸರು | : | ಶ್ಯಾಮ್ |
| ಫ್ರಾಯ | : | 32 ವರ್ಷ |
| ಉದ್ಯೋಗ | : | ಚಾಲಕ |
| ವಾಸ | : | ಕೊಲ್ಲೂರು |

ದಿನಾಂಕ: **07-11-2024** ಸಾಕ್ಷಿಗೆ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>

ಚಿತ್ತೂರು, ಮಾರಣಕಟ್ಟೆಯ ಬಳಿ ಪೋಲಿಸರಿಗೆ ಬುಲೇರೋ ಕಾರಿನಲ್ಲಿ ಬಂದವರು ಹೊಡೆದಿರುತ್ತಾರೆ, ಆತನ ಹೆಸರು ನೆನಪಿಲ್ಲ, ಆ ವಾಹನ ಬಿಳಿ ಬಣ್ಣದ ಬುಲೇರೋ ಆಗಿದ್ದು, ಅದರ ನಂಬರ ನೆನಪಿಲ್ಲ, ಪೋಲಿಸರು ನಮ್ಮನ್ನು ಸಾಕ್ಷಿಯಾಗಿ ಕರೆದಿರುತ್ತಾರೆ, ಆ ವಾಹನವನ್ನು ಪೋಲಿಸರು ದಿ: 15-01-2016 ರಂದು ಮಹಜರು ಮಾಡಿ ಪೋಲಿಸ ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ, ಸದರಿ ಮಹಜರನ್ನು 3-00 ಗಂಟೆಯಿಂದ 4-00 ಗಂಟೆಯವರೆಗೆ ಮಾಡಿರುತ್ತಾರೆ,

ಸಾಕ್ಷಿಗೆ ಕಡತದಲ್ಲಿರುವ ಮಹಜರನ್ನು ತೋರಿಸಲಾಗಿ, ಅದನ್ನು ಗುರುತಿಸಿದ ಮೇರೆಗೆ ಮಹಜರನ್ನು ನಿ.ಪಿ.8 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು, ಸಾಕ್ಷಿಗೆ ಪೋಟೋವನ್ನು ತೋರಿಸಲಾಗಿ, ಅದರಲ್ಲಿರುವ ವಾಹನವನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿರುತ್ತದೆ,

<u>ಪಾಟೀ ಸವಾಲು: ಆರೋಪಿ ಪರ ವಕೀಲರಾದ ಶ್ರೀ, ಹೆಚ್ ಎ ಎಸ್ ರವರಿಂದ:</u>

ನಾವು ಕೆಲಸ ಮಾಡುವ ಸ್ಥಳ ಪೋಲಿಸ ಠಾಣೆಯಿಂದ 50 ಮೀಟರ ದೂರದಲ್ಲಿರುತ್ತದೆ, ಈ ಕೇಸಿನ ಬಾಬ್ತು ಪೋಲಿಸ ಠಾಣೆಗೆ ಒಂದು ಬಾರಿ ಹೋಗಿರುತ್ತೇನೆ, ನಾನು ಠಾಣೆಗೆ ಹೋದಾಗ ಮಹಜರಿಗೆ 2 ಸಹಿಗಳನ್ನು ಮಾಡಿರುತ್ತೇನೆ, ಮಹಜರಿಗೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ,

ಮಹಜರಿನಲ್ಲಿ ಏನು ಬರೆದಿದೆ, ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಮಹಜರು ಬರೆದಿದ್ದು, ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ನಿಪಿ-5 ರ ಪೋಟೊದಲ್ಲಿರುವ ವಾಹನ ಹೊಡೆದಾಟಕ್ಕೆ ಸಂಬಂಧಿಸಿದ ವಾಹನ ಎಂದು ಗೊತ್ತಿರುತ್ತದೆ. ನಿಪಿ-5 ರ ಪೋಟೋದಲ್ಲಿರುವ ವಾಹನಕ್ಕೂ, ಈ ತಕ್ಷೀರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೋಲಿಸ ಠಾಣೆಯವರು ನನಗೆ ಪರಿಚಯಸ್ಥರು ಎಂದರೆ ಸರಿ. ನಮ್ಮ ಉದ್ಯೋಗಕ್ಕೆ ಪೋಲಿಸರ ಸಹಾಕರ ಬೇಕೆಂದು ಅವರ ಒತ್ತಾಯದ ಮೇರೆಗೆ ಒಂದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ತಕ್ಷೀರಿನ ಬಗ್ಗೆ ಏನು ಗೊತ್ತಿಲ್ಲದಿದ್ದರುಗ ಪೋಲಿಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ.